40

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) ರವರ ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 40ಕ್ಕೆ ಉತ್ತರ**

**ವಿಷಯ:** ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅರಣ್ಯದಲ್ಲಿ ಮತ್ತು ಅರಣ್ಯ ಅಂಚಿನಲ್ಲಿ ವಾಸಿಸುವ ಗಿರಿಜನರ ಮತ್ತು ಪಾರಂಪಾರಿಕ ಅರಣ್ಯವಾಸಿಗಳ ಹಾಡಿಗಳಲ್ಲಿ ಅವರ ಮನೆಗಳ ಹತ್ತಿರವಿರುವ ಮತ್ತು ಹಾಡಿಗಳಲ್ಲಿರುವ ಒಣಗಿದ ಅಪಾಯಕಾರಿ ದೊಡ್ಡ ದೊಡ್ಡ ಮರಗಳಿಂದ ಮನೆಗಳಿಗೆ, ಜನಗಳಿಗೆ ಮತ್ತು ಅವರ ಜಾನುವಾರುಗಳಿಗೆ ಹಾನಿಯಾಗುತ್ತಿದ್ದು, ಅನೇಕ ಹಳ್ಳಿಗಳ ಜನರು ಪ್ರಾಣಭೀತಿಯಲ್ಲಿ ಬದುಕುವಂತಾಗಿದೆ. ಆದ್ಯತೆಯ ಮೇರೆಗೆ ಈ ಗಂಭೀರ ಸಮಸ್ಯೆಯ ಕುರಿತು ಮುಂಜಾಗೃತ ಕ್ರಮ ಕೈಗೊಳ್ಳುವಂತೆ ನಿಯಮ 72ರ ಅಡಿಯಲ್ಲಿ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

****

**ಉತ್ತರ:** ಜೀವಕ್ಕೆ ಅಥವಾ ಹತ್ತಿರವಿರುವ ಸಾರ್ವಜನಿಕ/ಖಾಸಗಿ ಸ್ವತ್ತಿಗೆ ಮರವು ಹಾನಿ ಉಂಟು ಮಾಡುತ್ತಿದ್ದರೆ ಅಂತಹ ಮರಗಳನ್ನು ತೆಗೆಯಲು ಸಾರ್ವಜನಿಕರಿಂದ ಬೇಡಿಕೆ ಬಂದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಸುತ್ತೋಲೆ ಸಂ:ಪಿಎಸ್/ ಪ್ರಮುಅಸಂ/ ಮರ ಕಡಿತಲೆ/ ಸುತ್ತೋಲೆ/2006 ದಿನಾಂಕ:20-07-2006 ರಲ್ಲಿ ನೀಡಿರುವ ನಿರ್ದೇಶನದಂತೆ ಹಾಗೂ ಅದನ್ನು ಕಾನೂನು ರೀತಿ ವಿಲೇವಾರಿ ಮಾಡಲು ವೃಕ್ಷ ಅಧಿಕಾರಿಗಳಾದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಅರಣ್ಯ ಪ್ರದೇಶದಲ್ಲಿ ವಾಸಿಸುವ ಗಿರಿಜನರ ಮತ್ತು ಪಾರಂಪಾರಿಕ ಅರಣ್ಯ ವಾಸಿಗಳ ಹಾಡಿಗಳಲ್ಲಿ ಅವರ ಮನೆಗಳ ಹತ್ತಿರವಿರುವ ಅಥವಾ ಹಾಡಿಗಳಲ್ಲಿರುವ ಒಣಗಿದ ಅಪಾಯಕಾರಿ ಮರಗಳನ್ನು ತೆರವುಗೊಳಿಸಲು ಯಾವುದೇ ಪ್ರತ್ಯೇಕ ಮಾನದಂಡಗಳು ಇರುವುದಿಲ್ಲ.

ಆದರೆ, ಕಾರ್ಯಯೋಜನೆಯಲ್ಲಿ ಸತ್ತ ಮತ್ತು ಬಿದ್ದ ಮರಗಳನ್ನು ನಿಯಮಿತ ಮಧ್ಯಂತರದಲ್ಲಿ ಅರಣ್ಯ ಇಲಾಖೆ ವತಿಯಿಂದ ತೆರವು ಮಾಡಲಾಗುತ್ತಿದೆ.

ಅರಣ್ಯ ಇಲಾಖೆಯಲ್ಲಿ ಇಂತಹ ಪ್ರಕರಣಗಳಿಗೆ ಪರಿಹಾರ ಧನ ವಿತರಿಸಲು ಅವಕಾಶ ಇರುವುದಿಲ್ಲ. ಆದರೆ ಕಂದಾಯ ಇಲಾಖೆಯಲ್ಲಿ ಅತಿವೃಷ್ಟಿ / ಅನಾವೃಷ್ಟಿ ಪರಿಹಾರ ಮೊತ್ತದಲ್ಲಿ ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ಧನ ವಿತರಿಸುತ್ತಿರುತ್ತಾರೆ.

ಬೆಳಗಾವಿ ವಿಭಾಗದ ನಾಗರಗಾಳಿ ವಲಯ ವ್ಯಾಪ್ತಿಯಲ್ಲಿ ಬರುವ ನಾನಾ ಕೆಸರೋಡಗಾ (ಗೌಳಿವಾಡಾ) ಪ್ರದೇಶವು ಮೀಸಲು ಅರಣ್ಯ ಪ್ರದೇಶವಾಗಿರುತ್ತದೆ. ಪ್ರಸ್ತುತ ನಾನಾ ಕೆಸರೋಡಗಾ (ಗೌಳಿವಾಡಾ) ಪ್ರದೇಶದಲ್ಲಿ 25 ಕುಟುಂಬಗಳು ಇದ್ದು, 180 ಜನಸಂಖ್ಯೆ ಹೊಂದಿದ ಸಣ್ಣ ಗೌಳಿವಾಡಾವಾಗಿರುತ್ತದೆ. ಸದರಿ ಜನರು ಸುಮಾರು ವರ್ಷಗಳಿಂದ ಅಲ್ಲಿಯೇ ವಾಸವಾಗಿದ್ದು, 20 ಆತಂಕಕಾರಿ ಮರಗಳಿಂದ ಮಾನವ ಮತ್ತು ಸಾಕು ಪ್ರಾಣಿಗಳ ಪ್ರಾಣ ಹಾನಿಗೆ ಧಕ್ಕೆ ಆಗುವ ಸಂಭವ ಇರುವುದರಿಂದ ಸದರಿ ಮರಗಳನ್ನು ತೆಗೆಯಲು ಪದೇ ಪದೇ ವಲಯ ಕಛೇರಿಗೆ ಭೇಟಿ ನೀಡಿ, ಮೌಖಿಕವಾಗಿ ಕೋರಿಕೊಳ್ಳುತ್ತಿರುತ್ತಾರೆ. ಅದಲ್ಲದೇ ದಿನಾಂಕ: 27-12-2023 ರಂದು ಲಿಖಿತವಾಗಿಯೂ ಕೋರಿಕೊಂಡಿರುತ್ತಾರೆ. ಈ ಬಗ್ಗೆ ಹಲವಾರು ಬಾರಿ ಸಾರ್ವಜನಿಕ ಕುಂದು ಕೊರತೆ ಪರಿಶೀಲನಾ ಸಭೆಯಲ್ಲಿ ಮಾನ್ಯ ಜನಪ್ರತಿನಿಧಿಗಳಿಗೆ ಮನವಿಯನ್ನು ಸಹ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಅರ್ಜಿಯನ್ನು ಪರಿಶೀಲಿಸಲಾಗಿ, 20 ಮರಗಳ ಪೈಕಿ 10 ಒಣಗಿದ ಮರಗಳಿದ್ದು, ಅವುಗಳಿಂದ ಸಾರ್ವಜನಿಕರ ಪ್ರಾಣ ಹಾನಿಯಾಗುವ ಸಂಭವ ಇರುವುದರಿಂದ ಸದರಿ ಅರ್ಜಿಯನ್ನು ಆಧ್ಯತೆ ಮೇಲೆ ಹಾಗೂ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅಲ್ಲಿರುವ ಗ್ರಾಮಸ್ಥರಿಗೆ/ಚಿಕ್ಕಮಕ್ಕಳಿಗೆ ಹಾಗೂ ಸಾಕು ಪ್ರಾಣಿಗಳ ಪ್ರಾಣ ರಕ್ಷಣೆಗಾಗಿ ಸದರಿ ಆತಂಕಕಾರಿ 20 ಮರಗಳ ಪೈಕಿ 10 ಒಣಗಿದ ಮರಗಳನ್ನು ತೆರವುಗೊಳಿಸುವುದು ಸೂಕ್ತವೆಂದು ಪರಿಗಣಿಸಿ 10 ಒಣಗಿದ ಮರಗಳನ್ನು ಕಟಾವಣೆ ಮಾಡಿ, ಅರಣ್ಯ ಉತ್ಪನ್ನವನ್ನು ಸರ್ಕಾರಿ ಮರಮುಟ್ಟು ಸಂಗ್ರಹಾಲಯ, ತಾವರಗಟ್ಟಿಗೆ ಸಾಗಾಣಿಕೆ ಮಾಡಲು ಅನುಮತಿಸಲಾಗಿದೆ.

ಸಂಖ್ಯೆ: ಅಪಜೀ 34 ಎಫ್ ಡಿಪಿ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು